# ದತ್ತ

## (ಶಾಸ್ತ್ರೀಯ ವಿವೇಚನೆ ಮತ್ತು ಉಪಾಸನೆ)

## ಮನೋಗತ

ಹೆಚ್ಚಿನ ದತ್ತ ಭಕ್ತರಿಗೆ ದತ್ತನ ಬಗ್ಗೆ ಯಾವ ಅಲ್ಪಸ್ವಲ್ಪ ಮಾಹಿತಿ ಇರುತ್ತದೆಯೋ, ಅದು ಹೆಚ್ಚಾಗಿ ಅವರು ಓದಿರುವ ಅಥವಾ ಕೇಳಿರುವ ಕಥೆಗಳಿಂದ ಬಂದಿರುತ್ತದೆ. ಇಂತಹ ಅಲ್ಪಸ್ವಲ್ಪ ಮಾಹಿತಿಯಿಂದಾಗಿ ದತ್ತನ ಮೇಲಿರುವ ಅವರ ವಿಶ್ವಾಸವೂ ಅಲ್ಪಸ್ವಲ್ಪವೇ ಆಗಿರುತ್ತದೆ. ದತ್ತನ ಬಗ್ಗೆ ಹೆಚ್ಚು ಮಾಹಿತಿ ಸಿಕ್ಕಿದರೆ ಹೆಚ್ಚು ವಿಶ್ವಾಸ ನಿರ್ಮಾಣವಾಗಲು ಸಹಾಯವಾಗುತ್ತದೆ ಮತ್ತು ಅದರಿಂದ ಸಾಧನೆಯೂ ಚೆನ್ನಾಗಿ ಆಗುತ್ತದೆ. ಆಧ್ಯಾತ್ಮಿಕ ಉನ್ನತಿಗಾಗಿ 'ಪಿಂಡದಿಂದ ಬ್ರಹ್ಮಾಂಡ' ಹೀಗೆ ಪ್ರವಾಸ ಮಾಡಬೇಕಾಗಿರುತ್ತದೆ. ಅಂದರೆ 'ಬ್ರಹ್ಮಾಂಡದಲ್ಲಿ', ಅಂದರೆ ಶಿವನಲ್ಲಿ, ಯಾವ ತತ್ತ್ವಗಳಿವೆಯೋ, ಅವು 'ಪಿಂಡದಲ್ಲಿ' ಅಂದರೆ ಜೀವದಲ್ಲಿ ಬರಬೇಕಾಗುತ್ತದೆ. ಆಗಲೇ ಆ ಜೀವವು ಶಿವನೊಂದಿಗೆ ಏಕರೂಪವಾಗಬಹುದು. ನೀರಿನ ಹನಿಯಲ್ಲಿ ಎಣ್ಣೆಯ ಸ್ವಲ್ಪ ಅಂಶವಿದ್ದರೂ ಅದು ನೀರಿನೊಂದಿಗೆ ಏಕರೂಪವಾಗುವುದಿಲ್ಲ. ಅದೇ ರೀತಿ ದತ್ತಭಕ್ತನಲ್ಲಿ ದತ್ತನ ಎಲ್ಲ ವೈಶಿಷ್ಟ್ಯಗಳು ಇಲ್ಲದಿದ್ದರೆ ಅವನು ದತ್ತನೊಂದಿಗೆ ಏಕರೂಪವಾಗಲು ಸಾಧ್ಯವಿಲ್ಲ; ಅಂದರೆ ಅವನಿಗೆ ಸಾಯುಜ್ಯ ಮುಕ್ತಿಯು ಸಿಗುವುದಿಲ್ಲ. ಆದುದರಿಂದ ಈ ಗ್ರಂಥದಲ್ಲಿ ಬಹುತೇಕ ದತ್ತನ ಬಗ್ಗೆ ಇತರೆಡೆಗಳಲ್ಲಿ ಉಪಲಬ್ಧವಿಲ್ಲದ ಮತ್ತು ಉಪಯುಕ್ತವಾದಂತಹ ಮುಂದಿನ ಅಧ್ಯಾತ್ಮಶಾಸ್ತ್ರೀಯ ಮಾಹಿತಿಯನ್ನು ನೀಡಲಾಗಿದೆ - ದತ್ತ, ಅವಧೂತ, ದಿಗಂಬರ ಇಂತಹ ಹೆಸರುಗಳ ಭಾವಾರ್ಥ, ದತ್ತನು ಮಾಡಿರುವ ಗುಣಗುರುಗಳು ಮತ್ತು ಸಾಧಕರು ಅದೇರೀತಿ ಗುಣಗುರುಗಳನ್ನು ಮಾಡಿಕೊಳ್ಳುವುದರ ಮಹತ್ವ, ದತ್ತನ ಕಾರ್ಯ ಮತ್ತು ವೈಶಿಷ್ಟ್ಯಗಳು, ದತ್ತನ ಪರಿವಾರದ ಭಾವಾರ್ಥ, ಮೂರ್ತಿವಿಜ್ಞಾನ, ಅತೃಪ್ತ ಪೂರ್ವಜರ ತೊಂದರೆಗಳಿಂದ ರಕ್ಷಣೆಯಾಗಲು ದತ್ತನ ಉಪಾಸನೆಯನ್ನು ಮಾಡುವುದರ ಆವಶ್ಯಕತೆ ಮತ್ತು ಅದನ್ನು ಹೇಗೆ ಮಾಡಬೇಕು ಇತ್ಯಾದಿಗಳು.

ಈ ಅಧ್ಯಾತ್ಮಶಾಸ್ತ್ರದ ಮಾಹಿತಿಯು ದತ್ತಭಕ್ತರಿಗೆ ಮತ್ತು ದತ್ತನ ಸಾಂಪ್ರದಾಯಿಕ ಸಾಧನೆಯನ್ನು ಮಾಡುವವರಿಗೆ ಉಪಯುಕ್ತವಾಗಿದೆ; ಆದರೆ ಸಾಮಾನ್ಯ ವ್ಯಕ್ತಿಯು ಈ ಸಂದರ್ಭದಲ್ಲಿ ಮುಂದಿನ ನಿಯಮವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಶ್ರೀ ಗಣಪತಿ ಅಥರ್ವಶೀರ್ಷವನ್ನು ಓದಿದಾಗ ಶ್ರೀ ಗಣಪತಿಯ, ಶಿವಲೀಲಾಮೃತವನ್ನು ಓದಿದಾಗ ಶಿವನ ಮತ್ತು ದೇವಿ ಮಹಾತ್ಮೆಯನ್ನು ಓದಿದಾಗ ದೇವಿಯ ಉಪಾಸನೆಯನ್ನು ಮಾಡಬೇಕೆಂದು ಕೆಲವರಿಗೆ ಅನಿಸುತ್ತದೆ. ಅದೇ ರೀತಿ ಈ ಗ್ರಂಥದಲ್ಲಿನ ದತ್ತನ ಬಗೆಗಿನ ಮಾಹಿತಿಯನ್ನು ಓದಿ ನಾವೂ ದತ್ತನ ಉಪಾಸನೆಯನ್ನು ಕೂಡಲೇ ಆರಂಭಿಸಬೇಕು, ಎಂದು ಅವರಿಗೆ ಅನಿಸುವ ಸಾಧ್ಯತೆಯಿದೆ. ದತ್ತನಂತಹ ದೇವತೆಗಳ ಉಪಾಸನೆಯಿಂದ ಎಲ್ಲರ ಆಧ್ಯಾತ್ಮಿಕ ಉನ್ನತಿಯು ಶೀಘ್ರವಾಗಿ ಆಗುವುದಿಲ್ಲ; ಏಕೆಂದರೆ ಅವನ ಉಪಾಸನೆಯನ್ನು ಮಾಡುವುದು ಅವರಿಗೆ ಆವಶ್ಯಕತೆಯಿದ್ದರೆ ಮಾತ್ರ ಆ ಉಪಾಸನೆಯಿಂದ ಲಾಭವಾಗುತ್ತದೆ,

卐 ————————————————————————— 卐

ಇಲ್ಲದಿದ್ದರೆ ತುಂಬಾ ಸಾಧನೆಯನ್ನು ಮಾಡಿಯೂ ಕಡಿಮೆ ಪ್ರಗತಿಯಾಗುತ್ತದೆ. ದತ್ತನಂತಹ ದೇವತೆಯ ಉಪಾಸನೆಯನ್ನು ಮಾಡುವುದು ಆವಶ್ಯಕವಾಗಿದೆಯೋ ಅಥವಾ ಇಲ್ಲವೋ ಎಂಬುದು ಸಾಮಾನ್ಯ ವ್ಯಕ್ತಿಗಳಿಗೆ ತಿಳಿಯುವುದಿಲ್ಲ, ಅದನ್ನು ಅಧ್ಯಾತ್ಮದಲ್ಲಿನ ಉನ್ನತ ವ್ಯಕ್ತಿಗಳೇ ಹೇಳಬಲ್ಲರು; ಆದುದರಿಂದ ಸಾಮಾನ್ಯ ವ್ಯಕ್ತಿಯು ಕೇವಲ ಮಾಹಿತಿಗಾಗಿಯೇ ಈ ಗ್ರಂಥವನ್ನು ಓದಬೇಕು. ದತ್ತನ ಬಗ್ಗೆ ಅನುಭೂತಿ ಬರಲು ಸಾಧನೆಯ ಮೊದಲ ಹಂತವೆಂದು ತಮ್ಮ ಕುಲದೇವತೆಯ ನಾಮಜಪವನ್ನು ಮಾಡಬೇಕು (ಶ್ರೀ ಕುಲದೇವಿ / ಕುಲದೇವರ ಹೆಸರಿಗೆ ಚತುರ್ಥಿ ಪ್ರತ್ಯಯವನ್ನು ಸೇರಿಸಿ ನಮಃ ಎಂದು ಹೇಳಬೇಕು). ಅದರ ಜೊತೆಗೆ ಅತೃಪ್ತ ಪೂರ್ವಜರ ತೊಂದರೆಗಳಿಂದ ರಕ್ಷಣೆಯಾಗಲು ತೊಂದರೆಗಳ ತೀವ್ರತೆಗನುಸಾರ ಪ್ರತಿದಿನ ೧ ರಿಂದ ೬ ಗಂಟೆಗಳ ಕಾಲ ದತ್ತನ ಜಪವನ್ನು ಮಾಡಬೇಕು.

ಈ ಗ್ರಂಥವನ್ನು ಓದಿ ದತ್ತಭಕ್ತರ ದತ್ತನ ಮೇಲಿನ ಶ್ರದ್ಧೆಯು ಇನ್ನೂ ಹೆಚ್ಚು ದೃಢವಾಗಲಿ ಮತ್ತು ಪ್ರತಿಯೊಬ್ಬರಿಗೂ ಆದಷ್ಟು ಹೆಚ್ಚು ಸಾಧನೆಯನ್ನು ಮಾಡುವ ಪ್ರೇರಣೆ ಸಿಗಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. - ಸಂಕಲನಕಾರರು

卐 ————————————————————————— 卐


**ಆನಂದಪ್ರಾಪ್ತಿಗಾಗಿ ಸಾಧನೆಯ ಮಹತ್ವ ತಿಳಿಸುವ ಸನಾತನದ ಗ್ರಂಥ !**

## ನಾಮಜಪದ ಮಹತ್ವ ಮತ್ತು ಲಾಭಗಳು

- 卐 ಭಗವಂತನ ರೂಪಕ್ಕಿಂತ ಅವನ ನಾಮವು ಏಕೆ ಮಹತ್ವದ್ದಾಗಿದೆ?
- 卐 ನಾಮಜಪದಿಂದ ಮೃತ್ಯುವಿನ ನಂತರವೂ ಹೇಗೆ ಲಾಭವಾಗುವುದು?
- 卐 ಸಂಚಿತ ನಿರ್ಮಾಣವಾಗದಿರುವುದು, ಪ್ರಾರಬ್ಧದ ಮೇಲೆ ಜಯಗಳಿಸುವುದು ಮತ್ತು ಅಕರ್ಮ ಕರ್ಮವಾಗುವುದು ಇವುಗಳಿಗೆ ನಾಮಜಪವು ಹೇಗೆ ಸಹಾಯಕ?


'ಜನರೇ, ಇಂದು ಧರ್ಮಕ್ಕಾಗಿ ಬೆವರು ಸುರಿಸದಿದ್ದರೆ, ಮುಂದೆ ಆಪತ್ಕಾಲದಲ್ಲಿ ನಮ್ಮ ರಕ್ತ ಹರಿಯುವುದು, ಗಮನದಲ್ಲಿಡಿ !' - ಸನಾತನದ ಸಂತರಾದ ಸದ್ಗುರು ಅನುರಾಧಾ ವಾಡೇಕರ


**ಸನಾತನದ ಗ್ರಂಥಗಳನ್ನು ನಿಯಮಿತವಾಗಿ ಖರೀದಿಸುವ ವಾಚಕರಿಗೆ ವಿನಂತಿ !**

ಸನಾತನದ ಹೊಸ ಗ್ರಂಥಗಳ ಬಗ್ಗೆ ತಿಳಿದುಕೊಳ್ಳುವುದಿದ್ದಲ್ಲಿ ಸಂಪರ್ಕಿಸಿ -
E-mail : chaitanya.grantha@gmail.com / ಸಂಚಾರವಾಣಿ : 9342599299

'ಸನಾತನ'ದ ಗ್ರಂಥ 'ಆನ್‌ಲೈನ್'ನಲ್ಲಿ ಖರೀದಿಸಲು - www.SanatanShop.com

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. ಅರ್ಥ ೧೪

೨. ಇತರ ಕೆಲವು ಹೆಸರುಗಳು (ದತ್ತಾತ್ರೇಯ, ಅವಧೂತ, ದಿಗಂಬರ, ಶ್ರೀಪಾದ, ವಲ್ಲಭ) ೧೪

೩. ಜನ್ಮದ ಇತಿಹಾಸ ೧೭

೪. ಗುರುತತ್ತ್ವ (ದತ್ತತತ್ತ್ವ) ವು ಬ್ರಹ್ಮ, ವಿಷ್ಣು ಮತ್ತು ಮಹೇಶ ಈ ಮೂರು ತತ್ತ್ವಗಳು ಕೂಡಿ ನಿರ್ಮಾಣವಾಗಿದೆ. ೨೧

೫. ದತ್ತನ ಗುರುಗಳು ಮತ್ತು ಉಪಗುರುಗಳು ೨೧

೬. ವೈಶಿಷ್ಟ್ಯಗಳು ೩೨

* ತತ್ತ್ವ, ಕ್ಷಮತೆ ಮತ್ತು ಪ್ರಕಟ ಶಕ್ತಿ ೩೫

೭. ಕಾರ್ಯ ೩೫

೮. ಅವತಾರ ೪೧

೯. ಪರಿವಾರದ ಭಾವಾರ್ಥ ೪೧

೧೦. ದತ್ತಲೋಕ ೪೩

೧೧. ಮೂರ್ತಿ ವಿಜ್ಞಾನ ೪೫

೧೨. ಸನಾತನ ನಿರ್ಮಿತ ದತ್ತನ ಸಾತ್ತ್ವಿಕ 'ಚಿತ್ರ' ಮತ್ತು 'ನಾಮಪಟ್ಟಿ' ೫೪

೧೩. ಉಪಾಸನೆ ೬೦

* ದತ್ತನ ನಾಮಜಪ, ನಾಮಜಪದಿಂದಾಗುವ ಲಾಭಗಳು ೬೯

೧೪. ಪೂರ್ವಜರಿಗೆ ಗತಿ ದೊರಕಿಸಿಕೊಡುವ ದತ್ತನ ನಾಮಜಪ / ಉಪಾಸನೆ! ೭೫

೧೫. ದತ್ತನ ಉಪಾಸನೆಯಿಂದ ಕೆಟ್ಟ ಶಕ್ತಿಗಳ ತೊಂದರೆಗಳಿಂದ ರಕ್ಷಣೆಯಾಗುವುದು ೮೬

೧೬. ದತ್ತಸಂಪ್ರದಾಯ ೮೭

೧೭. ಪ್ರಮುಖ ತೀರ್ಥಕ್ಷೇತ್ರಗಳು ಮತ್ತು ಅವುಗಳ ವೈಶಿಷ್ಟ್ಯಗಳು ೯೦

೧೮. ಪ್ರಮುಖ ಗ್ರಂಥಗಳು ೯೩

೧೯. ಅನುಭೂತಿ ೯೩